**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,**
**ಚಿಕ್ಕಮಗಳೂರು**

<u>ಸತ್ರ ಮೊಕದ್ದಮೆ ನಂಃ **115/2018**</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಶೋಭಾ.ಕೆ | ಪಿಡಬ್ಲೂ - 12 |
| ಗಂಡನ ಹೆಸರು | - | ಶ್ರೀನಿವಾಸ್ ಆರ್ | ಸಿಡಬ್ಲೂ - 18 |
| ವಯಸ್ಸು | - | 48 ವರ್ಷ | |
| ಉದ್ಯೋಗ | - | ಪಿ ಎಸ್ ಐ ,<br>ಗ್ರಾಮಾಂತರ ಪೊಲೀಸ್ ಠಾಣೆ,<br>ಚಿಕ್ಕಮಗಳೂರು | |
| ವಾಸ ಸ್ಥಳ | - | ಚಿಕ್ಕಮಗಳೂರು | |

ದಿನಾಂಕಃ 18.03.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

1. ನಾನು ದಿನಾಂಕ 16.02.2017 ರಿಂದ 02.03.2018 ರವರೆಗೆ ಚಿಕ್ಕಮಗಳೂರಿನ ಮಹಿಳಾ ಪೊಲೀಸ್ ಠಾಣೆಯಲ್ಲಿ ಆರಕ್ಷಕ ಉಪನಿರೀಕ್ಷಕಳಾಗಿ ಕಾರ್ಯ ನಿರ್ವಹಿಸಿದ್ದೇನೆ.

2. ದಿನಾಂಕಃ 28.09.2017 ರಂದು ನಾನು ಠಾಣೆಯಲ್ಲಿದ್ದ ಸಮಯದಲ್ಲಿ ರಾತ್ರಿ 9.00 ಗಂಟೆಗೆ ಚಿಕ್ಕಮಗಳೂರು ಲಕ್ಷ್ಮೀಶನಗರದ ವಾಸಿ ಕಾವ್ಯ ಶ್ರೀ ಕೋಂ ಸುಪ್ರೀತ್ ಪ್ರವೀಣ್ ಕುಮಾರ್ ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದು ಠಾಣಾ ಮೊಕದ್ದಮೆ ಸಂಖ್ಯೆಃ 41/2017 ರಂತೆ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಸದರಿ ದೂರನ್ನು ನೋಡುತ್ತಿದ್ದು

ಅದನ್ನು ಈಗಾಗಲೇ ನಿಪಿ.1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ನಾನು ದಾಖಲು ಮಾಡಿದ್ದ ಪ್ರಥಮ ವರ್ತಮಾನ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ.21 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.21(ಎ) ಎಂದು ಗುರುತಿಸಲಾಯಿತು.

3. ಪ್ರಕರಣವು ಘೋರ ಅಪರಾಧವನ್ನು ಒಳಗೊಂಡಿದ್ದರಿಂದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ.19 ರವರಿಗೆ ನೀಡಿರುತ್ತೇನೆ.

<u>ಪಾಟೀ ಸವಾಲುಃ ಶ್ರೀ ಐ ಎಸ್ ಟಿ ವಕೀಲರಿಂದ – ಆರೋಪಿತರ ಪರವಾಗಿ</u>

4. ನೀವು ಹೇಳಿದಂತೆ ಪಿರ್ಯಾದಿ ಠಾಣೆಗೆ ಹಾಜರಾಗಿ ಯಾವುದೇ ದೂರನ್ನು ನೀಡದೇ ಇದ್ದರೂ ಸಹ ಆರೋಪಿತರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಯಾವುದೇ ಕೃತ್ಯ ನಡೆಯದೇ ಇದ್ದರೂ ಸಹ ಸುಳ್ಳು ದೂರನ್ನು ಪಡೆದು ಸುಳ್ಳು ಪ್ರಕರಣವನ್ನು ದಾಖಲಿಸಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ
ಹೇಮಾ